**ದಿನಾಂಕಃ 11.07.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಜೆ.ಎಂ ರವರಿಂದಃ**

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನಿಪಿ-6 ಸರ್ವೆ ನೋಟಿಸಿನ ಸಹಿ ನನ್ನ ತಂದೆಯದಲ್ಲ. ಅಲಿಗೆಹೊಡೆಯರಹಳ್ಳಿ ಸರ್ವೆ ನಂ.127 ಜಮೀನು ಈಗಲೂ ಸಹ ವ್ಯವಸಾಯ ಉಪಯುಕ್ತ ಜಮೀನು ಎಂದರೆ ಸರಿ. ನಿಡಿ-10 ಪಹಣಿಯ 2 ನೇ ಪುಟದಲ್ಲಿ ಖಾತೆದಾರರ ಕಲಂನಲ್ಲಿ ವಾದಿಯ ಹೆಸರು ಮುಂದುವರೆದಿರುತ್ತದೆ ಎಂದರೆ ಸರಿ. ನನ್ನ ತಂದೆ ದಾವಾ ಸ್ವತ್ತಿನ ಮೇಲೆ ದಾನ ಪತ್ರ ಬರೆಯುವ ಪೂರ್ವದಲ್ಲಿ ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನನ್ನ ತಂದೆಯು ದಾನ ಪತ್ರ ನೊಂದಾವಣೆಗೊಳ್ಳುವ ಕಾಲಕ್ಕೆ ನನ್ನ ಕೈಗೆ ಕೊಟ್ಟಿರುವುದಿಲ್ಲ. ದಾನ ಪತ್ರದ ಸ್ವತ್ತುಗಳು ಅಸ್ತಿತ್ವದಲ್ಲಿ ಇರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಆದರೆ ನನ್ನ ತಂದೆ ಹಾಜರು ಪಡಿಸಿರುತ್ತಾರೆ. ಈ ಪ್ರಕರಣದಲ್ಲಿ ನನ್ನ ತಂದೆಯು ಸಾಕ್ಷಿದಾರರಾಗಿ ವಿಚಾರಣೆ ಮಾಡಿಕೊಂಡಿರುತ್ತಾರೆ. ಆದರೆ ಅವರು ಏನೇನು ಸಾಕ್ಷ್ಯ ಕೊಟ್ಟಿರುತ್ತಾರೆ ಎಂದು ನನಗೆ ಅಷ್ಟೊಂದು ಗೊತ್ತಿಲ್ಲ. ನನ್ನ ತಂದೆಯು ಈ ನ್ಯಾಯಾಲಯಕ್ಕೆ ಯಾವಲ್ಲಾ ದಾಖಲೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.127 ಜಮೀನನ್ನು ಮೂಲ ಪುರುಷ ಸಿದ್ದರೆಡ್ಡಿ ಮರಣ ನಂತರ ಅವರ ಮಕ್ಕಳ ಎಲ್ಲರ ಜಂಟಿ ಖಾತೆಯಲ್ಲಿ ಇರುತ್ತದೆ ಎಂದರೆ ಸರಿ. ತದ ನಂತರ ವಾದಿಯು ದಾವಾ ಸ್ವತ್ತಿನ ವಿಭಾಗ ಕೋರಿ 2005 ರಲ್ಲಿ ದಾವಾ ಹೂಡಿದ್ದರು ಎಂದರೆ ನನಗೆ

ಗೊತ್ತಿಲ್ಲ. ದಿಃ12.01.2010 ರಂತೆ ಸದರಿ ದಾವೆಯಲ್ಲಿ 1/9 ನೇ ಭಾಗ ವಾದಿಯ ಭಾಗಾಂಶದ ಹಕ್ಕು ನಿರ್ಧಾರವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪಿನ್ನು ಅಮಲ್ ಜಾರಿಗೊಳಿಸಲು ವಾದಿಯು ಒಂದು ಎಫ್.ಡಿ.ಪಿ ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಎಫ್.ಡಿ.ಪಿ ಪ್ರಕರಣದ ತೀರ್ಪಿನಂತೆ ವಾದಿಗೆ ಸರ್ವೆ ನಂ.127 ರಲ್ಲಿ 1/9 ನೇ ಭಾಗ ಬಿಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ ಪ್ರಕರಣದ ತೀರ್ಪಿನಂತೆ ಸರ್ವೆ ನಂ.127 ಜಮೀನು ಸರ್ವೆಗೊಂಡು ಅದುಬಸ್ತು ಪೋಡಿಯಾಗಿ ವಾದಿಯ ಭಾಗಾಂಶ ನಿರ್ಧಾರಗೊಂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ದಾನದ ಮೂಲಕ ನನಗೆ ವರ್ಗಾವಣೆ ಆಗುವ ಕಾಲಕ್ಕೆ ದಾವಾ ಸ್ವತ್ತಿನ ಖಾತೆಯು ನಮ್ಮ ತಂದೆಯ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆ ಇರುತ್ತದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾನ ಪತ್ರದ ಶೆಡ್ಯೂಲ್ ಸ್ವತ್ತು ನನ್ನ ತಂದೆಯ ಹೆಸರಿಗೆ ದಾನ ಪತ್ರ ಬರೆದುಕೊಡುವ ಕಾಲಕ್ಕೆ ಖಾತೆ ಇತ್ತು ಎಂದು ತೋರಿಸಲು ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

(ಓಂಕಾರಪ್ಪ. ಆರ್.)
5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.